ಜೆಎಸ್‌ಎಸ್ ಮಹಿಳಾ ಕಾಲೇಜು (ಸ್ವಾಯತ್ತ)

ಸರಸ್ವತಿಪುರಂ, ಮೈಸೂರು 09

ಕನ್ನಡ ವಿಭಾಗ

ಕನ್ನಡ ಅಧ್ಯಯನ ಮಂಡಳಿ ಸಭೆ ಅಕ್ಟೋಬರ್ - 2021

# ನಡಾವಳಿ

ದಿನಾಂಕ:22.10.2021ರ ಶುಕ್ರವಾರ ಬೆಳಗ್ಗೆ 11.00 ಗಂಟೆಗೆ ಕನ್ನಡ ಅಧ್ಯಯನ ಮಂಡಳಿ ಸಭೆ ಏರ್ಪಡಿಸಲಾಗಿತ್ತು. 2021-22 ರ ಕನ್ನಡ ಅಧ್ಯಯನ ಮಂಡಳಿ ಸಭೆಯು 2020 ರ ರಾಷ್ಟ್ರೀಯ ಶಿಕ್ಷಣ ನೀತಿಯ ಆಶಯಗಳಿಗೆ ಅನುಗುಣವಾಗಿ ಹಾಗು ಮೈಸೂರು ವಿಶ್ವ ವಿದ್ಯಾನಿಲಯದ ಪಠ್ಯಕ್ರಮಕ್ಕನುಗುಣವಾಗಿ ಮೊದಲನೆಯ ಮತ್ತು ಎರಡನೆಯ ಚತುರ್ಮಾಸಗಳ ಕನ್ನಡ ಭಾಷೆ , ಐಚ್ಛಿಕ ಕನ್ನಡ , ಮುಕ್ತಆಯ್ಕೆ ಕನ್ನಡ ಮತ್ತು ಕನ್ನಡೇತರರಿಗೆ ಕಡ್ಡಾಯ ಕನ್ನಡ ಪಠ್ಯಕ್ರಮವನ್ನು ಸೂಕ್ತ ಪರಿಷ್ಕರಣೆಗಳೊಡನೆ ಚರ್ಚಿಸಿ ಅನುಮೋದನೆ ಪಡೆಯಲಾಯಿತು. ಪ್ರಸ್ತುತ 2021 ರಲ್ಲಿ ಅಧ್ಯಯನ ಮಾಡುತ್ತಿರುವ ಮೂರು , ನಾಲ್ಕು , ಐದು ಮತ್ತು ಆರನೆಯ ಚತುರ್ಮಾಸಗಳಿಗೆ ಸಿಬಿಸಿಎಸ್ ಪಠ್ಯವನ್ನೇ ಯಾವುದೇ ಬದಲಾವಣೆ ಮಾಡದೆ ಮುಂದುವರಿಸಲು ತೀರ್ಮಾನಿಸಲಾಯಿತು.

ಮೈಸೂರು ವಿಶ್ವ ವಿದ್ಯಾನಿಲಯದ ಪ್ರಶ್ನೆಪತ್ರಿಕೆಯ ಮಾದರಿ ಮತ್ತು ಆಂತರಿಕ ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ಪರೀಕ್ಷಾವಿಧಾನವನ್ನು ಅಳವಡಿಸಿಕೊಳ್ಳಲು ಚರ್ಚಿಸಿ ತೀರ್ಮಾನಿಸಲಾಯಿತು. ಮೌಲ್ಯಮಾಪಕರ ಪಟ್ಟಿಯನ್ನು ಸಿದ್ಧಪಡಿಸಿ ಅನುಮೋದನೆ ಪಡೆಯಲಾಯಿತು.

ಆಂತರಿಕ (ಸಿಐಇ) ಹಾಗು ಸೆಮಿಸ್ಟರ್ ಕೊನೆಯ ಲಿಖಿತ ಪರೀಕ್ಷೆ(ಎಸ್‌ಇಇ)ಗಳ ವಿಧಾನವು ಈ ಕೆಳಗಿನಂತಿರುತ್ತದೆ. ಪಠ್ಯಚೌಕಟ್ಟು ಸಮಿತಿ ಸೂಚನೆಯಂತೆ ಆಂತರಿಕ(ಸಿಐಇ) ಮೌಲ್ಯಮಾಪನವು ಶೇ.40 ಅಂಕಗಳನ್ನು ಹಾಗು ಸೆಮಿಸ್ಟರ್ ಕೊನೆಯ ಪರೀಕ್ಷೆಯು (ಎಸ್‌ಇಇ) ಶೇ.60 ಅಂಕಗಳ ನಿಯಮವನ್ನು ಈ ಕೆಳಗಿನ ಮಾನದಂಡಗಳನ್ನು ಅನುಸರಿಸಿ ಮಾಪನ ಮಾಡಲು ಸೂಚಿಸುತ್ತದೆ.

| ಕ್ರ.ಸಂ | ಪರೀಕ್ಷಾ ಮಾನದಂಡಗಳು | ಅಂಕಗಳು |
|---|---|---|
| | ಆಂತರಿಕ ನಿರಂತರ ಮೌಲ್ಯಮಾಪನ (ಸಿಐಇ) | |
| 1 | ನಿರಂತರ ಮತ್ತು ಸಮಗ್ರ ಮೌಲ್ಯಮಾಪನ (ಸಿಸಿಇ) | 10 |
| 2 | ಆಂತರಿಕ ಮೌಲ್ಯಮಾಪನ ಪರೀಕ್ಷೆಗಳು | 15+15 |
| | ಒಟ್ಟು ಸಿಐಇ (1+2) | 40 |
| 3 | ಸೆಮಿಸ್ಟರ್ ಅಂತ್ಯದ ಪರೀಕ್ಷೆ (ಎಸ್‌ಇಇ) | 60 |
| | ಒಟ್ಟು (ಸಿಐಇ ಮತ್ತು ಎಸ್‌ಇಇ ) | 100 |

ಸಭೆಯ ಅಧ್ಯಕ್ಷತೆ ವಹಿಸಿದ್ದ ವಿಭಾಗದ ಮುಖ್ಯಸ್ಥರಾದ ಶ್ರೀ ಆರ್ ಎಸ್ ಕುಮಾರ್ ಸಭೆಗೆ ಆಗಮಿಸಿದ್ದ ಎಲ್ಲರನ್ನು ಆತ್ಮೀಯವಾಗಿ ಸ್ವಾಗತಿಸಿದರು.

ಒಟ್ಟಾರೆ ವಿದ್ಯಾರ್ಥಿಗಳ ಗ್ರಹಿಕೆ ಮತ್ತು ಅಭಿವ್ಯಕ್ತಿ ಸಾಮರ್ಥ್ಯಕ್ಕೆ ಪೂರಕವಾಗಿ ಪಠ್ಯ ಮತ್ತು ಪರೀಕ್ಷೆಗಳ ಸಿದ್ಧತೆಯನ್ನು ಕೈಗೊಳ್ಳುವುದರ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಯಿತು.

ಸಭೆಗೆ ಆಗಮಿಸಿದ್ದ ಎಲ್ಲರನ್ನು ಅಧ್ಯಾಪಕ ಶ್ರೀ ಹೊನ್ನಶೆಟ್ಟಿ ಎಲ್ಲರನ್ನು ವಂದಿಸಿದರು.

| ಕ್ರ.ಸಂ | ಸಭೆಯಲ್ಲಿ ಹಾಜರಿದ್ದ ಸದಸ್ಯರು | ಸಹಿ |
|---|---|---|
| 1 | ಡಾ.ಎಂ. ಜಿ. ಮಂಜುನಾಥ<br>ನಿರ್ದೇಶಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ,<br>ಮೈಸೂರು | [signature] |
| 2 | ಶ್ರೀ ಆರ್ .ಎಸ್.ಕುಮಾರ್<br>ಮುಖ್ಯಸ್ಥರು,<br>ಜೆಎಸ್‌ಎಸ್ ಮಹಿಳಾ ಕಾಲೇಜು(ಸ್ವಾಯತ್ತ),<br>ಸರಸ್ವತಿಪುರಂ ,ಮೈಸೂರು | [signature] |
| 3 | ಡಾ. ಎನ್ .ಮಹೇಶ್ವರಿ<br>ಮುಖ್ಯಸ್ಥರು, ಕನ್ನಡ ವಿಭಾಗ ಜೆಎಸ್‌ಎಸ್ ಕಲಾ,<br>ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು (ಸ್ವಾಯತ್ತ),<br>ಬಿ.ಎನ್ ರಸ್ತೆ ,ಮೈಸೂರು | [signature] |
| 4 | ಡಾ. ಎ.ಆರ್. ಮದನ್ ಕುಮಾರ್<br>ಮುಖ್ಯಸ್ಥರು, ಕನ್ನಡ ವಿಭಾಗ<br>ಸರ್ಕಾರಿ ಮಹಿಳಾ ಕಾಲೇಜು , ಮಂಡ್ಯ | [signature] |
| 5 | ಶ್ರೀ ಹೊನ್ನಶೆಟ್ಟಿ<br>ಸಹಾಯಕ ಪ್ರಾಧ್ಯಾಪಕರು<br>ಜೆಎಸ್‌ಎಸ್ ಮಹಿಳಾ ಕಾಲೇಜು(ಸ್ವಾಯತ್ತ),<br>ಸರಸ್ವತಿಪುರಂ ,ಮೈಸೂರು | [signature] |
| 6 | ಕು. ಜಾಹ್ನವಿ. ಎಸ್<br>ಅತಿಥಿ ಉಪನ್ಯಾಸಕರು<br>ಸರ್ಕಾರಿ ಪ್ರಥಮ ದರ್ಜೆ ಕಾಲೇಜು<br>ಕುದೇರು, ಚಾಮರಾಜನಗರ ಜಿಲ್ಲೆ | [signature] |